ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೫೭

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಬಸವನ ಬಾಗೇವಾಡಿ – ಇಂಗಳೇಶ್ವರ ಜಿಲ್ಲಾ ಮುಖ್ಯರಸ್ತೆಯು ಸಂಪೂರ್ಣ ಹದಗೆಟ್ಟಿದ್ದು, ಸಂಚಾರಕ್ಕೆ ಆತಂಕವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಉತ್ತರ

ಹೌದು ಬಂದಿರುತ್ತದೆ.

ಕ್ರ.ಸಂ. ಪ್ರಶ್ನೆ

ಆ) ಹಾಗಿದ್ದಲ್ಲಿ ಮುಖ್ಯವಾದ ಈ ರಸ್ತೆಯನ್ನು ಪುನರ್ ವ್ಯವಸ್ಥೆಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ:

ಉತ್ತರ

೨೦೦೪-೦೫ನೇ ಸಾಲಿನಲ್ಲಿ ಗುಂಡಿ ಮುಚ್ಚುವ ಕೆಲಸ ನಿರ್ವಹಿಸಿದ್ದು ರಸ್ತೆಯನ್ನು ಸಂಚಾರ ಯೋಗ್ಯವನ್ನಾಗಿ ಇಡಲಾಗಿದೆ. ಇದಲ್ಲದೆ ೨೦೦೫-೦೬ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ರಸ್ತೆಯ ಮರು ಡಾಂಬರೀಕರಣವನ್ನು ಕೈಗೆತ್ತಿಕೊಳ್ಳಲಾಗುವುದು.

ಕ್ರ.ಸಂ. ಪ್ರಶ್ನೆ

ಇ) ನಿರ್ದಿಷ್ಟ ಕಾಲಮಿತಿಯೊಳಗೆ ರಸ್ತೆಯನ್ನು ಯಾವಾಗ ಸಂಪೂರ್ಣವಾಗಿ ಪುನರ್ ವ್ಯವಸ್ಥೆಗೊಳಿಸಲಾಗುವುದು?

ಉತ್ತರ

ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಕೆಯನ್ನು ಹಂತ ಹಂತವಾಗಿ ಪೂರೈಸಲು ಕ್ರಮಕೈಗೊಳ್ಳಲಾಗುವುದು.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಆದರೆ ಉತ್ತರದಲ್ಲಿ ನಿರ್ದಿಷ್ಟವಾಗಿ ಏನೂ ಸರಿಯಾದಂತಹ ವಿಚಾರವನ್ನು ವ್ಯಕ್ತಪಡಿಸಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಸದರಿ ರಸ್ತೆ ಎಂಡಿಆರ್ ರಸ್ತೆ. ಈ ರಸ್ತೆಯನ್ನು ಮಾಡಿರುವುದು, ೧೯೭೨ರಲ್ಲಿ. ಇದುವರೆಗೂ ಕೇವಲ ಪಾಟ್‌ಹೋಲ್ ಫಿಲ್ಲಿಂಗ್ ಮಾಡಿ ಆ ರಸ್ತೆಯನ್ನು ರಿಸ್ಟೋರ್ ಮಾಡುತ್ತೇವೆಂದರೆ ಆಗುವುದಿಲ್ಲ. ಈಗ ಸಿಆರ್‌ಎಫ್ ಇದೆ, ಕೆಆರ್‌ಡಿಸಿ ಇದೆ, ಅದೂ ಅಲ್ಲವೆಂದರೆ ನಬಾರ್ಡ್ ಇದೆ. ಇದು ಯಾವುದರಲ್ಲಿಯಾದರೂ ತೆಗೆದುಕೊಂಡು ಈ ವರ್ಷದ ಆಯವ್ಯಯದಲ್ಲಿ ಹಾಕಿ ಮಾಡಿಕೊಡುತ್ತೇವೆನ್ನುವ ಉತ್ತರ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗಾಗಲೆ ಎಂಡಿಆರ್ ರಸ್ತೆಗೆ ಪಾಟ್‌ಹೋಲ್ ನಾವು ಮಾಡಿದ್ದೇವೆ. ಹಣಕಾಸಿನ ಲಭ್ಯತೆ ಮೇಲೆ ಈ ರಸ್ತೆಯನ್ನು ಮಾಡಿಸುವುದಕ್ಕೆ ನಾವು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹಣಕಾಸಿನ ಲಭ್ಯತೆ ಎಂದರೆ ಅದರ ಅರ್ಥವೇನು? ಈಗ ನಾನು ಹೇಳುವುದೇನೆಂದರೆ, ಎಂಡಿಆರ್ ರಸ್ತೆಯು ಯಾವರೀತಿ ಇದೆ ಎನ್ನುವುದು ನಿಮಗೆ ಗೊತ್ತಿದೆ. ಅದನ್ನು ನಿಮ್ಮ ಉತ್ತರದಲ್ಲಿ ನೀವು ಹೇಳಿದ್ದೀರಿ, ಹೌದು ರಸ್ತೆ ಹದಗೆಟ್ಟಿದೆ ಎಂದು. ೧೯೭೨ರಲ್ಲಿ ಮಾಡಿರತಕ್ಕಂಥ ಡಾಂಬರೀಕರಣ ಇಲ್ಲಿಯವರೆಗೆ ಉಳಿಯುತ್ತದೆಯೇ? ನೀವು ಮಾಡತಕ್ಕಂಥ ನಬಾರ್ಡ್ ಹಾಗೂ ಸಿಆರ್‌ಎಫ್ ಲಿಸ್ಟ್ ನೋಡಿದರೆ ಸಿಂಹಪಾಲು ೭೫ ಪರ್ಸೆಂಟ್ ನಿಮ್ಮ ಭಾಗಕ್ಕೆ ಬರುತ್ತದೆ. ಉತ್ತರ ಕರ್ನಾಟಕಕ್ಕೆ ೨೫ ಅಥವಾ ೩೦ ಪರ್ಸೆಂಟ್ ನೀವು ಕೊಡುತ್ತೀರಿ.

ಶ್ರೀ ಶಿವಾನಂದ ಎಸ್. ಪಾಟೀಲ್: ನಾವು ನಿಮ್ಮನ್ನು ಮೊನ್ನೆ ದಿವಸ ಕೇಳಿದ್ದೇನೆ. ಫೋರ್ ಲೈನ್ ಹೈವೇ ಬಗ್ಗೆ ಮತ್ತು ಎನ್.ಹೆಚ್. ಬಗ್ಗೆ ಕೇಳಿದ್ದೇನೆ. ಬಜಾಪುರದ್ದು ಕೇಳಿದ್ದೇನೆ. ತಾವು ಪ್ರತಿಯೊಂದಕ್ಕೂ ಉತ್ತರವನ್ನು ಕೊಡುತ್ತೀರಿ. ತಾವು ನಿರ್ದಿಷ್ಟವಾಗಿ ಏನು ಹೇಳುವುದಕ್ಕೆ ಇಚ್ಛಿಸುವುದಿಲ್ಲ. ಇದನ್ನು ನಬಾರ್ಡ್‌ನಲ್ಲಿ ಈಗ ೨೦೦೫-೦೬ರಲ್ಲಿ ಇದೆ, ಸಿ.ಆರ್.ಎಫ್ ಇದೆ. ಇದರಲ್ಲಿ ಯಾವುದರಲ್ಲಾದರೂ ಒಂದರಲ್ಲಿ ತೆಗೆದುಕೊಂಡು, ನಿರ್ದಿಷ್ಟವಾಗಿ ತೆಗೆದುಕೊಂಡು ಮಾಡುತ್ತೇನೆಂಬ ಉತ್ತರವನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೇ, ಇದು ನಬಾರ್ಡ್‌ನಲ್ಲಿ ಬರುವುದಿಲ್ಲ. ಜಲ್ಲಿ ರಸ್ತೆಯಾದರೆ ನಬಾರ್ಡ್‌ನಲ್ಲಿ ತೆಗೆದುಕೊಳ್ಳಬಹುದು. ಜಲ್ಲಿ ರಸ್ತೆ ಇಲ್ಲದೇ

ರೀಅಸಪಾಲ್ಪ್ ಮಾಡುವುದಕ್ಕೆ ನಬಾರ್ಡ್‌ನಲ್ಲಿ ಕೊಡುವುದಿಲ್ಲ, ಇದನ್ನು ಬಿಟ್ಟು ಬೇರೆ ಯಾವುದಾದರೂ ರೀತಿಯಲ್ಲಿ ಹಣಕಾಸಿನ ವ್ಯವಸ್ಥೆಯನ್ನು ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು:

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ೧೮೨ನೇ ಪಟ್ಟಿಯಲ್ಲಿರುವ ೨೧೨ ಪ್ರಶ್ನೆಗಳ ಪೈಕಿ ೧೭೬ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಮಾತನಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ನಾವು ನಿಲುವಳಿ ಸೂಚನೆ ಒಂದು ಕಳುಹಿಸಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಬಗ್ಗೆ...

ಅಧ್ಯಕ್ಷರು : ನಾನು ಅದನ್ನು ನೋಡಿದ್ದೇನೆ. ಅದು ಆಡಳಿತಾತ್ಮಕವಾದ ವಿಚಾರವಾಗಿದೆ. ಅದನ್ನು ಬಜೆಟ್‌ನಲ್ಲೂ ಪ್ರಸ್ತಾಪ ಮಾಡಬಹುದು. ಅದನ್ನು ನಾನು ಗಮನ ಸೆಳೆಯುವ ಸೂಚನೆ ಎಂದು ಕನವರ್ಟ್ ಮಾಡಿ, ಅದಕ್ಕೆ ಅವಕಾಶವನ್ನು ಕೊಡುತ್ತೇವೆ. ಈಗ ವಿತ್ತೀಯ ಕಾರ್ಯಕಲಾಪವಾದ ಮೇಲೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ರಸ್ತೆಗಳು ಹಾಳಾಗಿರುವಂಥದ್ದು, ನಮ್ಮೆಲ್ಲರ ಅನುಭವದಲ್ಲಿ ಇರುವಂಥಾದ್ದು, ಆದುದರಿಂದ ಇದು ಬಹಳ ಪ್ರಮುಖವಾದಂತಹ ವಿಷಯವಾಗಿದೆ.

ಅಧ್ಯಕ್ಷರು : ಆಯಿತು, ಈಗ ವಿತ್ತೀಯ ಕಾರ್ಯಕಲಾಪಗಳು ಆದ ತಕ್ಷಣ ಮಧ್ಯಾಹ್ನ ಇದನ್ನು ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈ ಅಧಿವೇಶನ ಮುಗಿದ ಮೇಲೆ ನಾವು ಊರಿಗೆ ಹೋಗುವ ಸ್ಥಿತಿಯಲ್ಲಿ ಇಲ್ಲ ಆ ರೀತಿಯಾಗಿದೆ.